KARNATAK UNIVERSITY, DHARWAD
ACADEMIC (S&T) SECTION

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-450/UGCE/2025-26/105 Date: 08 SEP 2025

**ಸುತ್ತೋಲೆ-1**

ವಿಷಯ: ೨೦೨೫-೨೬ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಪದವಿ 1ನೇ ಸೆಮಿಸ್ಟರ್‌ಗೆ ಪ್ರವೇಶಕ್ಕೆ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ: ೧. ಕರ್ನಾಟಕ ಸರಕಾರವು ಆದೇಶ ಸಂ.ಇಡಿ/೨೬೦/ಯುಎನ್‌ಇ/೨೦೧೯(ಭಾಗ-1)ಬೆಂಗಳೂರು, ದಿ:೦೭.೦೮.೨೦೨೧.
೨. ಕಚೇರಿ ಸುತ್ತೋಲೆ ಸಂ.Ku/Aca(S&T)/RPH-೩೯೪-A/೨೦೨೧-೨೨/೧೮ ದಿ. ೨೧.೦೮.೨೦೨೧.
೩. ಸರ್ಕಾರದ ಆದೇಶ ಸಂ.ಇಡಿ ೧೧೬, ಯುಎನ್‌ಇ ೨೦೨೩, ಬೆಂಗಳೂರು ದಿ ೦೮.೦೫.೨೦೨೪.
೪. ಕಚೇರಿ ಅಧಿಸೂಚನೆ ಸಂ:ku/Aca(S&T)/SSL-೪೭೩/UGCE/೨೦೨೫-೨೬/೧೧,ದಿ: ೨೬.೦೪.೨೦೨೫.
೫. ಸರ್ಕಾರದ ಆದೇಶ ಸಂ.ಇಡಿ ೨೧೬, ಯುಎನ್‌ಇ ೨೦೨೫, ಬೆಂಗಳೂರುದಿ ೩೦.೦೬.೨೦೨೫.
೬. ಕಚೇರಿ ಸುತ್ತೋಲೆ ಸಂ. KU/Aca(S&T)/SSL-475/೨೦೨೫-೨೬/೭೦,ದಿ. ೧೯.೦೭.೨೦೨೫.
೭. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿವಿ-೧), ಬೆಂಗಳೂರು ಇವರ ಪತ್ರ ಸಂ:ಇಡಿ ೨೧೬ ಯುಎನ್‌ಇ ೨೦೨೫,ದಿ: ೦೩.೦೯.೨೦೨೫.
೮. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08.09.2025

-----

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ, ಉಲ್ಲೇಖ-7ರ ಸರ್ಕಾರದ ಆದೇಶದ ಮೇರೆಗೆ, 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ತರಗತಿಗಳಿಗೆ 1ನೇ ಸೆಮಿಸ್ಟರ್ ಪ್ರವೇಶಕ್ಕೆ ದಂಡಶುಲ್ಕ ರಹಿತವಾಗಿ ದಿನಾಂಕ: 15.09.2025ರ ವರೆಗೆ ವಿಸ್ತರಿಸಲಾಗಿದೆ. ದಂಡ ರಹಿತವಾಗಿ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳ ಯಾದಿಯನ್ನು ದಿನಾಂಕ: 17.09.2025 ರೊಳಗಾಗಿ ಅಗತ್ಯ ಪ್ರಕ್ರಮದೊಂದಿಗೆ ಸಲ್ಲಿಸುವುದು ಹಾಗೂ 3 & 5ನೇ ಸೆಮಿಸ್ಟರ್ ಪ್ರವೇಶಕ್ಕೆ ಉಲ್ಲೇಖ 6ರ ಸುತ್ತೋಲೆಯನ್ನು ಅನುಸರಿಸುವುದು.

ಮುಂದುವರೆದು, ಈ ಅವಧಿಯಲ್ಲಿ ಪ್ರವೇಶ ನೀಡಿದ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ರಜಾ ದಿನಗಳಲ್ಲಿ ತರಗತಿ ಜರುಗಿಸಿ ಹಾಗೂ ಕರ್ತವ್ಯದ ದಿನಗಳಲ್ಲಿ ಹೆಚ್ಚುವರಿ ತರಗತಿಗಳನ್ನು ಜರುಗಿಸಿ ಕನಿಷ್ಠ ಶೇ. 75 ರಷ್ಟು ಹಾಜರಾತಿಯನ್ನು ಪೂರೈಸುವಂತೆ ಕ್ರಮವಹಿಸುವುದು ಹಾಗೂ 2025-26ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಇದು ತಮ್ಮ ಗಮನಕ್ಕೆ ತರಬಯಸುತ್ತೇವೆ.

ಸದರ ಮಾಹಿತಿಯನ್ನು ಕ.ವಿ.ವಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಸುತ್ತೋಲೆಯಂತೆ ಕ್ರಮವಹಿಸುವಂತೆ ಸೂಚಿಸಲಾಗಿದೆ.

**ವಿಶೇಷ ಸೂಚನೆ:**

1. ಪ್ರವೇಶವನ್ನು UUCMS ನಲ್ಲಿಯೇ ಪಡೆಯತಕ್ಕದ್ದು, ತಾಂತ್ರಿಕ ಕಾರಣಗಳಿಂದ UUCMS ನಲ್ಲಿ ಶುಲ್ಕವನ್ನು ಭರಿಸಲು ಸಾಧ್ಯವಾಗದಿದ್ದರೆ, SBI Collect ಮೂಲಕ ಶುಲ್ಕ ಭರಿಸತಕ್ಕದ್ದು, ಅದರಂತೆ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಮಾಹಿತಿ ನೀಡುವುದು.
2. ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ನಿಗದಿತ ಅವಧಿಯೊಳಗಾಗಿ ಕ.ವಿ.ವಿ.ಗೆ ಸಲ್ಲಿಸದಿದ್ದಲ್ಲಿ ತದ ನಂತರದ ಪ್ರತಿ ದಿವಸಕ್ಕೆ ರೂ. 150/- ರಂತೆ ವಿಳಂಬ ಶುಲ್ಕ ವಿಧಿಸಲಾಗುವುದು.

08/9/2025

ಅಡಕ:ಮೇಲಿನಂತೆ

ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ

ಪು.ತಿ.ನೋ

ಪ್ರತಿ:

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬAಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 216 ಯುಎನ್ಇ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 03.09.2025.

**ಸುತ್ತೋಲೆ**

ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 216 ಯುಎನ್ಇ 2025, ದಿನಾಂಕ: 30.06.2025ರಲ್ಲಿ, ಪದವಿ ಕಾಲೇಜುಗಳಿಗೆ ಪ್ರವೇಶಾತಿ ಪಡೆಯಲು ಅನುಕೂಲವಾಗಲು ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು / ಕಾಲೇಜು ಶಿಕ್ಷಣ / ಅನುದಾನ / ಅನುದಾನ ರಹಿತ ಕಾಲೇಜುಗಳಿಗೆ (ತಾಂತ್ರಿಕ ಶಿಕ್ಷಣವನ್ನು ಹೊರತುಪಡಿಸಿ) ಅನ್ವಯಿಸುವಂತೆ **ದಿನಾಂಕ:30.08.2025ರವರೆಗೆ** ದಂಡ ಶುಲ್ಕರಹಿತವಾಗಿ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸಲಾಗಿತ್ತು.

ಮುಂದುವರೆದು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ಪೈಕಿ ಶೇ.10 ರಿಂದ 15ರಷ್ಟು ಐ.ಟಿ.ಐ ವಿದ್ಯಾರ್ಥಿಗಳಾಗಿದ್ದು, ಈ ಕೋರ್ಸ್‌ನ ಪರೀಕ್ಷಾ ಫಲಿತಾಂಶವು ಇದುವರೆಗೂ ಪ್ರಕಟವಾಗಿರುವುದಿಲ್ಲ. ಈ ಹಿನ್ನಲೆಯಲ್ಲಿ ಪದವಿ ಕೋರ್ಸುಗಳ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಪದವಿ ಕೋರ್ಸುಗಳ ಪ್ರವೇಶಾತಿ ಸಂಬಂಧ ದಂಡ ಶುಲ್ಕರಹಿತವಾಗಿ ಪ್ರವೇಶಾತಿ ಪಡೆಯಲು **ದಿನಾಂಕ:15.09.2025** ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ. ಉಳಿದಂತೆ ದಿನಾಂಕ:30.06.2025_ರಲ್ಲಿ ಸುತ್ತೋಲೆಯಲ್ಲಿ ಹೊರಡಿಸಿರುವ ಸೂಚನೆಗಳು / ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

(ಶಶಿಕಲಾ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

**ಗೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ, ವಿಕಾಸಸೌಧ,
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು
5. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
6. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ
8. ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಗೆ
9. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನ ಕಾಲೇಜುಗಳ ಪ್ರಾಂಶುಪಾಲರಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ)
10. ಉನ್ನತ ಶಿಕ್ಷಣ ಇಲಾಖೆಯಡಿ ಬರುವ ವಿಶ್ವವಿದ್ಯಾಲಯಗಳ ಕಾಲೇಜುಗಳಿಗೆ (ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಮೂಲಕ)
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು)